**ಕರ್ನಾಟಕ ಸರ್ಕಾರ**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.**

**ಸಿ.ಸಿ.ನಂ.884/2014**

ಪಿ.ಡಬ್ಲ್ಯೂಃ 23

ಸಿ.ಡಬ್ಲ್ಯೂಃ 25

ಸಾಕ್ಷಿದಾರರ ಹೆಸರು ಃ ಉಪೇಂದ್ರ

ತಂದೆಯ ಹೆಸರು ಃ ರಂಗೇಗೌಡ

ವಯಸ್ಸು ಃ 55 ವರ್ಷ

ಉದ್ಯೋಗ ಃ ವ್ಯವಸಾಯ

ವಾಸಸ್ಥಳ ಃ ಬಾವಿಕೆರೆ

**ದಿನಾಂಕಃ 01-12-2020 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆ ಃ ಸ.ಸ.ಅ. ರವರಿಂದ.**

2013 ನೇ ಇಸವಿಯಲ್ಲಿ ಪೋಲೀಸರು ಲಕ್ಕವಳ್ಳಿ ಪೋಲೀಸ್ ಠಾಣೆಯಲ್ಲಿ ನನ್ನ ಸಮಕ್ಷಮ ಚಾಸಾ-14 ರವರಿಂದ ಚಾಸಾ-19 ರವರನ್ನು ಪರಿಚಯಿಸಿ ನನ್ನ ಸಮಕ್ಷಮ ಅವರ ಸಹಿಗಳನ್ನು ಪಡೆದಿರುತ್ತಾರೆ. ಬಾವಿಕೆರೆಯ ಕಾವೇರಿ ಗ್ರಾಮೀಣ ಬ್ಯಾಂಕಿನ ಮ್ಯಾನೇಜರ್ ರವರು ನಕಲಿ ಸಹಿ ಪಡೆದು ಅವರ ಖಾತೆಯ ಮೂಲಕ ಹಣ ದುರುಪಯೋಗಪಡಿಸಿಕೊಂಡಿರುವ ಪ್ರಕರಣ ದಾಖಲಾಗಿರುವ ಬಗ್ಗೆ ನನ್ನ ಹಾಗೂ ಚಾಸಾ-6 ರವರ ಸಮಕ್ಷಮ ಸಹಿ ಪಡೆದು ಮಹಜರ್ ಜರುಗಿಸಿರುತ್ತಾರೆ. ಸಾಕ್ಷಿಯು ಮಹಜರಿನಲ್ಲಿರುವ ತನ್ನ ಸಹಿಯನ್ನು ಗುರುತಿಸಿದ್ದು ಅದನ್ನು ನಿಪಿ-27 ಎಂದು, ಸಾಕ್ಷಿ ಸಹಿಯನ್ನು ನಿಪಿ-27(ಎ) ಎಂದು ಗುರುತಿಸಲಾಯ್ತು.

**ಪಾಟೀ ಸವಾಲು ಃ ಆರೋಪಿ ಪರ** ಶ್ರೀ ಎಂ ಕೆ ಟಿ **ವಕೀಲರಿಂದ.**

ನಿಪಿ27 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಆ ಸಮಯದಲ್ಲಿ ಯಾವ ಯಾವ ಅಮಾನತ್ತು ಕ್ರಮಗಳನ್ನು ಜರುಗಿಸಿದರೆಂದು ನನಗೆ ಗೊತ್ತಿಲ್ಲ ಎಂದರೆ ಸರಿ. ನಿಪಿ-27 ನ್ನು ಬೆರಳಚ್ಚು ಮಾಡಿ ಪ್ರಿಂಟ್ ತೆಗೆದಿರುತ್ತಾರೆ. ಚಾಸಾ-14 ರಿಂದ 19 ರವರ ಸಹಿಗಳು ಹೌದೋ, ಅಲ್ಲವೋ ಎಂಬ ಬಗ್ಗೆ ಚರ್ಚೆ ಮಾಡಿದರು. ನಾನು ನಿಪಿ-27 ನ್ನು ಓದಿ ಸಹಿ ಮಾಡಿರುತ್ತೇನೆ. ನಿಪಿ-27 ನ್ನು ಪೋಲೀಸ್ ಠಾಣೆಯಲ್ಲಿ ಬರೆದಿರುತ್ತಾರೆ. ನಿಪಿ-27 ನ್ನು ಬೆಃ 11 ಗಂಟೆ ಸಮಯದಲ್ಲಿ ಬರೆದಿರುತ್ತಾರೆ. ನನಗೆ ಪ್ರಕರಣದ ಬಗ್ಗೆ ಏನು ತಿಳಿಯದೇ ಇದ್ದರೂ ಸಹ ಪೋಲೀಸರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಮಹಜರಿನಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಮಹಜರಿನಲ್ಲಿ ಬಂಗಾರ ಹಾಗೂ ಹಣದ ದುರುಪಯೋಗವಾಗಿದೆ ಎಂದು ಬರೆದಿದೆ ಎಂದರೆ ಸರಿ. ಅದನ್ನು ಹೊರತುಪಡಿಸಿ ಬೇರೆ ಏನೂ ಬರೆದಿಲ್ಲ ಎಂದರೆ ಸರಿ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

**ಓ. ಕೇ. ಸ. ಇ. ಎ. ಒ.**

Sd/-

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**

**ಪ್ರ.ದ.ನ್ಯಾ.ದಂ.ರವರು,ತರೀಕೆರೆ.**